ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ
ನವನಗರ, ಹುಬ್ಬಳ್ಳಿ – 580025
ದೂರವಾಣಿ ಸಂಖ್ಯೆ : 0836–2222392, ಫ್ಯಾಕ್ಸ್ : 0836–2223392

ಸಂಖ್ಯೆ: ಕರಾಕಾವಿ/ಆಡಳಿತ/2016–17/0710 ದಿನಾಂಕ: 19–07–2016

## ಅಧಿಸೂಚನೆ

**ವಿಷಯ** : ವಿಶ್ವವಿದ್ಯಾಲಯದ ಸಿವಿಲ್ ಹಾಗೂ ಕಟ್ಟಡ ಕಾಮಗಾರಿ ಸಮಿತಿ (Civil Works and Building Committee) ರಚನೆ ಮಾಡುವ ಕುರಿತು.

**ಉಲ್ಲೇಖ**: 1. ದಿನಾಂಕ : 31–5–2016ರಂದು ಜರುಗಿದ 51ನೇ ಸಿಂಡಿಕೇಟ್ ಸಭೆಯ ನಡುವಳಿ (ವಿಷಯ ಸಂಖ್ಯೆ: 29)

2. ಮಾನ್ಯ ಕುಲಪತಿಗಳ ಪತ್ರದ ಸಂಖ್ಯೆ : KSLU/VCS/2016-17 ದಿನಾಂಕ : 11–7–2016.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಅಧಿನಿಯಮ–2009ರ ಕಲಂ 43 (read with Section 2 of the Statue relating to the power and function of the Works Committee) ರನ್ವಯ ವಿಶ್ವವಿದ್ಯಾಲಯದ ಸಿವಿಲ್ ಹಾಗೂ ಕಟ್ಟಡ ಕಾಮಗಾರಿಗಳಿಗೆ ಸಂಬಂಧಿಸಿದ ಕಾರ್ಯಕಲಾಪಗಳನ್ನು ನಿರ್ವಹಿಸಲು ಸಿವಿಲ್ ಹಾಗೂ ಕಟ್ಟಡ ಕಾಮಗಾರಿ ಸಮಿತಿ (Civil Works and Building Committee)ಯನ್ನು ಪುನರ್‌ರಚಿಸಲು ದಿನಾಂಕ : 31–5–2016ರಂದು ಜರುಗಿದ 51ನೇ ಸಿಂಡಿಕೇಟ್ ಸಭೆಯು ಉಲ್ಲೇಖ 1ರಡಿ ನಮೂದಿಸಿದ ನಡುವಳಿಯಲ್ಲಿ ಅನುಮೋದನೆಯನ್ನು ಪಡೆದುಕೊಳ್ಳಲಾಗಿದೆ. ಸದರ ಸಮಿತಿಗೆ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರನ್ನು ಗೊತ್ತುಮಾಡಲು ಮಾನ್ಯ ಕುಲಪತಿಗಳಿಗೆ ಸಿಂಡಿಕೇಟ್ ಸೂಚಿಸಿದಂತೆ ಮಾನ್ಯ ಕುಲಪತಿಗಳು ಉಲ್ಲೇಖ 2ರಡಿ ನಮೂದಿಸಿದ ತಮ್ಮ ಪತ್ರದಲ್ಲಿ ಸದಸ್ಯರುಗಳ ಹೆಸರನ್ನು ನಮೂದಿಸಿರುತ್ತಾರೆ. ಆ ಮೇರೆಗೆ **ಸಿವಿಲ್ ಹಾಗೂ ಕಟ್ಟಡ ಕಾಮಗಾರಿ ಸಮಿತಿ (Civil Works and Building Committee)ಯನ್ನು** ಈ ಕೆಳಗಿನಂತೆ ಪುನರ್‌ರಚಿಸಿದೆ.

### ಸಿವಿಲ್ ಹಾಗೂ ಕಟ್ಟಡ ಕಾಮಗಾರಿ ಸಮಿತಿ (Civil Works and Building Committee)

| ಅ.ನಂ. | ಹೆಸರು | ಪದನಾಮ |
|---|---|---|
| 1. | ಕುಲಪತಿಗಳು | ಅಧ್ಯಕ್ಷರು |
| 2. | ಅಧೀಕ್ಷಕ ಅಭಿಯಂತರರು, ಧಾರವಾಡ ವೃತ್ತ, ಧಾರವಾಡ | ಸದಸ್ಯರು |
| 3. | ಕಾರ್ಯನಿರ್ವಾಹಕ ಅಭಿಯಂತರರು, ಓ & ಎಂ ಡಿವಿಜನ್, ಹುಬ್ಬಳಿ | ಸದಸ್ಯರು |
| 4. | ಹಣಕಾಸು ಅಧಿಕಾರಿಗಳು, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ | ಸದಸ್ಯರು |
| 5. | ಆಯುಕ್ತರು ಹುಬ್ಬಳ್ಳಿ–ಧಾರವಾಡ ಮಹಾನಗರಪಾಲಿಕೆ, ಧಾರವಾಡ | ಸದಸ್ಯರು |

| | | |
|---|---|---|
| 6. | ಉಪ ನಿರ್ದೇಶಕರು, ಭೂ ದಾಖಲಾತಿ ಇಲಾಖೆ ಅಥವಾ ಅವರ ನಾಮನಿರ್ದೇಶಿತರು (ಸಹಾಯಕ ನಿರ್ದೇಶಕರ ಹುದ್ದೆಗೆ ಕಡಿಮೆ ಇರದ ಹುದ್ದೆ ಹೊಂದಿದವರು) | ಸದಸ್ಯರು |
| 7. | ಶ್ರೀ ಎಂ. ಪಾರ್ಥ, ಸಿಂಡಿಕೇಟ್ ಸದಸ್ಯರು | ಸದಸ್ಯರು |
| 8. | ಶ್ರೀ ಜೆ. ಎಂ. ಅನಿಲ್ ಕುಮಾರ, ಸಿಂಡಿಕೇಟ್ ಸದಸ್ಯರು | ಸದಸ್ಯರು |
| 9. | ಕುಲಸಚಿವರು | ಸದಸ್ಯರು |
| 10. | ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 11. | ಸ್ಥಾನಿಕ ಅಭಿಯಂತರರು, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ | ಸದಸ್ಯ ಕಾರ್ಯದರ್ಶಿಗಳು |

ಸದರ ಸಮಿತಿಯು ಈ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುವುದು ಹಾಗೂ ಸಮಿತಿಯ ಕಾರ್ಯಾವಧಿಯು ಸಿಂಡಿಕೇಟ್ ಸಮಿತಿಯ ಕಾರ್ಯಾವಧಿಗೆ ಸಮಾನಾಂತರವಾಗಿರುತ್ತದೆ.

ತಮ್ಮ ವಿಶ್ವಾಸಿ,

19/07/16

ಕುಲಸಚಿವರು

ಗೆ,

ಸಿವಿಲ್ ಹಾಗೂ ಕಟ್ಟಡ ಕಾಮಗಾರಿ ಸಮಿತಿ (**Civil Works and Building Committee**)
ಸಮಿತಿಯ ಎಲ್ಲ ಸದಸ್ಯರಿಗೆ

ಪ್ರತಿಯನ್ನು,

1. ವಿಶ್ವವಿದ್ಯಾಲಯದ ಎಲ್ಲ ವಿಭಾಗದ ಮುಖ್ಯಸ್ಥರುಗಳಿಗೆ.
2. ಮುಖ್ಯಸ್ಥರು, ಐ.ಸಿ.ಟಿ. ವಿಭಾಗ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ ಇವರ ಮಾಹಿತಿಗಾಗಿ ಹಾಗೂ ವಿಷಯವನ್ನು ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಅಳವಡಿಸಲು.
3. ಆಪ್ತಕಾರ್ಯದರ್ಶಿಗಳು, ಮಾನ್ಯ ಕುಲಪತಿಗಳ ಕಾರ್ಯಾಲಯ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ.
4. ಆಪ್ತಕಾರ್ಯದರ್ಶಿಗಳು, ಮಾನ್ಯ ಕುಲಸಚಿವರ ಕಾರ್ಯಾಲಯ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ.